ಶ್ರೀ ಆರ್. ಎಸ್. ನಾಯಕ್.—ದೋಷಪೂರಿತ ಕೊಳಚೆ ನೀರಲ್ಲ, ಒಳಚರಂಡಿ ವ್ಯವಸ್ಥೆ ಕೆಟ್ಟಿದೆ. ಇಂಪಾರ್ಟೆಂಟ್ ಇರುವುದು ಅಲ್ಲಿ.

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಅದು ಗೊತ್ತಿಲ್ಲ. ತಾವು ಕೊಟ್ಟಿರುವ ಈ ನೋಟಿಸ್‌ನಲ್ಲಿ ಏನಿದೆ ಎಂದರೆ ಒಳಚರಂಡಿಯಿಂದ ದೋಷಪೂರಿತ ನೀರು ಹೊರಹರಿದು ಕುಡಿಯುವ ನೀರಿನ ವ್ಯವಸ್ಥೆಯ ನಾಲೆಯಲ್ಲಿ ಇಳಿದಿದೆ ಎಂದು. ಅದಕ್ಕೆ ಉತ್ತರ ಕೊಡುತ್ತಿದ್ದೇನೆ. ಹಾಗೇನಾದರೂ ಆಗಿದ್ದರೆ ಇವತ್ತೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅದನ್ನು ನಿಲ್ಲಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಬಹುಶಃ ನಾನೇ ಅದನ್ನು ತಪ್ಪು ತಿಳಿದುಕೊಂಡಿರಬಹುದು. ಇವರು ಕೊಳಚೆನೀರು ಎಂದು ಹೇಳಿದರು. ಒಳಚರಂಡಿ ಬೇರೆ, ಕೊಳಚೆ ನೀರು ವ್ಯವಸ್ಥೆ ಬೇರೆ.

ಅಧ್ಯಕ್ಷರು.—ನಾಯಕ್‌ರವರೇ, ಮಂತ್ರಿಗಳ ಕೊಠಡಿಗೆ ಹೋಗಿ ಚರ್ಚಿಸಿ.

XXVI ಬಿ. ಎಂ. ಎಸ್. ಇಂಜಿನಿಯರಿಂಗ್ ಕಾಲೇಜು ತೆರೆಯುವ ಬಗ್ಗೆ

ಶ್ರೀ ರತ್ನಾಕರ ಪಟಮಕ್ಕಿ.—ಅಧ್ಯಕ್ಷರೇ, ಬಿಎಂಎಸ್ ಇಂಜಿನಿಯರ್ ಕಾಲೇಜ್ ಇದೇ ಮಾರ್ಚಿ ೨೫ನೇ ತಾರೀಖಿನಿಂದ ಮುಚ್ಚಿದೆ. ಸಪ್ಲಿಮೆಂಟರಿ ಪರೀಕ್ಷೆಗೆ ಕೂಡತಕ್ಕಂಥ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಹೀಗೆ ಯಾವ ಕಾಲೇಜೂ ಮುಚ್ಚುವುದಿಲ್ಲ, ಈ ಕಾಲೇಜು ಸಹ ಹಿಂದೆ ಮುಚ್ಚಿರಲಿಲ್ಲ. ಆದ್ದರಿಂದ ಹೊಸದಾಗಿ ಸೇರಿರತಕ್ಕಂಥ ವಿದ್ಯಾರ್ಥಿಗಳಿಗೆ ಹಾಗೂ ವಿದ್ಯೆಯನ್ನು ಕಲಿಯಬೇಕೆಂದು ಬರುವ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳಿಗೆ ತೊಂದರೆಯಾಗುತ್ತಿದೆ. ಸರ್ಕಾರ ಈ ಬಗ್ಗೆ ತೀವ್ರನಿಗಾ ವಹಿಸಿ ವಿದ್ಯಾರ್ಥಿಗಳ ಪಾಠಪ್ರವಚನಗಳಿಗೆ ತೊಂದರೆಯಾಗದಂತೆ ಸರ್ಕಾರ ಈ ಇಂಜಿನಿಯರಿಂಗ್ ಕಾಲೇಜನ್ನು ಕೂಡಲೇ ತೆರೆಯಬೇಕೆಂದು ವ್ಯವಸ್ಥೆ ಮಾಡಬೇಕೆಂದು ತಮ್ಮ ಕೇಳಿಕೊಳ್ಳುತ್ತೇನೆ. ಜೊತೆಗೆ ಈ ಕಾಲೇಜು ಮುಚ್ಚಿಸುವಲ್ಲಿ ಸೂಕ್ಷ್ಮ ರಾಜಕೀಯ ನಡೆದಿದೆ, ಇಂತಹ ರಾಜಕೀಯ ಶಕ್ತಿಗಳನ್ನು ದೂರವಿಟ್ಟು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕಾಲೇಜು ತೆರೆಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಮನವಿ ಮಾಡುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—ಘನ್ಮಾನ್ಯ ಸಭಾಧ್ಯಕ್ಷರೇ, ಇದರಲ್ಲಿ ರಾಜಕೀಯ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಕಾಲೇಜನ್ನು ಮುಚ್ಚಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರಿಗೆ ತೊಂದರೆಯಾಗಿರುವುದು ನಿಜವಾಗಿದ್ದಲ್ಲಿ ಈಗಲೇ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಅವರನ್ನು ಕರೆಸಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ಮತ್ತು ಕಾಲೇಜಿನ ಪ್ರಾಂಶುಪಾಲರನ್ನೂ ಕರೆಸಿ ಮಾತನಾಡಿ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲೂ ತೊಂದರೆಯಾಗದಂತೆ ತರಗತಿಗಳು ನಡೆಯುವಂತೆ ನಾನು ಏರ್ಪಾಡು ಮಾಡುತ್ತೇನೆ.

೧೧-೦೦ ಎ. ಎಂ.

XXVII ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡಿರುವ ಬಗ್ಗೆ

ಶ್ರೀ ಬಿ ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಈಗ ಇಡೀ ರಾಜ್ಯಾದ್ಯಂತ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯುತ್ತಿವೆ. ೧-೪-೧೯೮೫ ರಂದು ಪರೀಕ್ಷೆ ಪ್ರಾರಂಭವಾಯಿತು. ೩೧-೩-೮೫ ರಂದೇ ಪ್ರಶ್ನೆ ಪತ್ರಿಕೆ ಹೊರಬಿದ್ದೆ ಬಂದಿದೆ. ೨ನೇ ತಾರೀಖು ನಡೆದ ಇಂಗ್ಲೀಷ್ ಪತ್ರಿಕೆಯು ಕೂಡ ಹಿಂದಿನ ದಿನವೇ ಪ್ರಶ್ನೆ ಪತ್ರಿಕೆ ಬಹಿರಂಗವಾಗಿದೆ. ಇದು ನನ್ನ ಗಮನಕ್ಕೆ ಬಂದಿದ್ದು ನಾನು ಇದನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಈ ರೀತಿ ಪ್ರಶ್ನೆ ಪತ್ರಿಕೆಯು ಬಹಿರಂಗವಾಗುವುದಕ್ಕೆ ಏನು ಕಾರಣ ? ಇದರ ಸತ್ಯಾಸತ್ಯತೆಯನ್ನು ತಿಳಿಯಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.